ಅಧ್ಯಕ್ಷರು.—ಆಗಲಿ, ಇದರ ಬಗ್ಗೆ ಚರ್ಚೆಮಾಡಲು ಒಂದು ದಿನವನ್ನು ಗೊತ್ತು ಮಾಡೋಣ.

ಒಬ್ಬ ಸದಸ್ಯರು.—ಸ್ವಾಮಿ, ನಾನು ಅನೇಕ ಪ್ರಶ್ನೆಗಳನ್ನು ತಮಗೆ ಕಳುಹಿಸಿದ್ದೇನೆ. ಆದರೆ ಇದುವರೆಗೂ ಒಂದೂ ಕೂಡ ಸಭೆಯಲ್ಲಿ ಬಂದಿಲ್ಲ.

(ಉತ್ತರ ಇಲ್ಲ)

ANNOUNCEMENT

MR. SPEAKER.—I have received the following message from the Chairman, Legislative Council.

> As required by rule 106 of the Rules of Procedure and Conduct of Business in the Karnataka Legislative Council, I send here with the following three Bills which have been agreed to by the Logislative Council on 16th March, 1981 without amendments.

NAME OF THE BILLS

1. The Bangalore Development Authority (Amendment) Bill 1981.
2. The Karnataka Local Authorities Official Language (Amendment) Bill, 1981.
3. The Karnataka Debt Relief (Amendment) Bill, 1981.

SRI B. B. SAYANAK.—Mr. Speaker, Sir, the tobacco growers are asking for a reasonable price to their produce.

MR. SPEAKER.—I have seen your calling attention notice.

SRI B. B. SAYANAK.—The workers are on Rasta-Roko sinc 14th thereby caus ng inconvenience to the pub'ic. Therefore, I request the Hon'ble Chief Minister to make a statement which he promised yesterday

MR. SPEAKER.—I will fix up a date,

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೆ, ನಾನು ತಮಗೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ನನ್ನು ಕಳುಹಿಸಿಕೊಟ್ಟಿದ್ದೇನೆ, ದಯವಿಟ್ಟು ಅದನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ತಾವು ಕಳುಹಿಸಿಕೊಟ್ಟಿರುವ ವಿಷಯವನ್ನು ನೋಡಿದ್ದೇನೆ. ಆದರೆ ಅದು ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ. ಇದು ತಮಗೂ ಕೂಡ ಗೊತ್ತಾಗುತ್ತದೆ. ಆದ್ದರಿಂದ ತಾವು ಇದನ್ನು ಬೇರೆ ಯಾವ ರೀತಿಯಲ್ಲಿ ಪ್ರಸ್ತಾಪ ಮಾಡಬಹುದೆಂಬುದನ್ನು ಆಲೋಚನೆ ಮಾಡಿ ನೋಡಿ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ನಮ್ಮ ಕರ್ನಾಟಕಕ್ಕೆ ಆಗೌರವವನ್ನು ತರತಕ್ಕ ವಿಚಾರದ ಬಗ್ಗೆ ನಾನು.....

ಅಧ್ಯಕ್ಷರು.—ನೀವು ಕಳುಹಿಸಿಕೊಟ್ಟಿರುವ ವಿಷಯದ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆ ವಿಷಯ ಏನಾದರೂ ಇರಲಿ, ಆದರೆ, ತಾವು ಕಳುಹಿಸಿಕೊಟ್ಟಿರುವುದು